**ಸಿಸಿ ನಂಬರಃ 2440/2024**

**ಸಾಕ್ಷಿಃ ಪಿ. ಡಬ್ಲ್ಯೂಃ 1**

**(ಇಂದು ತಾಃ 06-11-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ.ಜಿ.ಎನ್. ವಕೀಲರಿಂದ,**

ಆರೋಪಿಯು ನನ್ನ ಪತ್ನಿಯ ವಿರುದ್ಧ ಪೋಲೀಸ್ ಠಾಣೆಯಲ್ಲಿ ಈ ಪ್ರಕರಣದಲ್ಲಿ ಹೇಳಿರುವ ಹಣಕಾಸಿನ ವಿಷಯಕ್ಕೆ ಸಂಬಂಧಿಸಿದಂತೆ ದೂರು ದಾಖಲಿಸಿದ್ದರು ಎಂದರೆ ಸರಿಯಲ್ಲ, ಅವರ ಸಂಘದ ವಿಷಯಕ್ಕೆ ಸಂಬಂಧಿಸಿದಂತೆ ದೂರು ದಾಖಲಿಸಿರುತ್ತಾರೆ. ಪ್ರಭಾವತಿ ಶೆಟ್ಟಿ ಎಂಬುವವರು ನನ್ನ ಪತ್ನಿಯ ಸ್ನೇಹಿತೆಯಾಗಿದ್ದು ನನಗೆ ಪರಿಚಿತರು. ಸದ್ರಿಯವರ ಮನೆ ಆರೋಪಿಯ ಮನೆಯ ಹತ್ತಿರ ಇರುತ್ತದೆ. ಆರೋಪಿಯು ನನ್ನ ಪತ್ನಿ ಮತ್ತು ಸದ್ರಿ ಪ್ರಭಾವತಿ ಶೆಟ್ಟಿಯವರ ವಿರುದ್ಧ ಈ ಮೇಲೆ ಹೇಳಿದಂತೆ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು ಎಂದರೆ ಸರಿಯಲ್ಲ. ಆರೋಪಿ ನೀಡಿದ ದೂರಿನನ್ವಯ ನನ್ನನ್ನು ಮತ್ತು ನನ್ನ ಪತ್ನಿಯನ್ನು ಪೋಲೀಸ್ ಠಾಣೆಗೆ ವಿಚಾರಣೆಗೆ ಕರೆದಿರುತ್ತಾರೆ. ಆಗ ಪೋಲೀಸರು ದೂರಿನ ವಿಚಾರವನ್ನು ನ್ಯಾಯಾಲಯದಲ್ಲಿ ಇತ್ಯರ್ಥ ಪಡಿಸಿಕೊಳ್ಳಿ ಎಂದು ನನಗೆ ಹೇಳಿರುತ್ತಾರೆ.

2. ಆರೋಪಿಯ ಮಗ ವಿಘ್ನೇಶ ರವರ ಪರಿಚಯ ನನಗೆ ಇರುತ್ತದೆ. ಸದ್ರಿ ವಿಘ್ನೇಶ ರವರು ಈ ದೂರಿನಲ್ಲಿ ಹೇಳಿದ ಸಾಲದ ಹಣವನ್ನು ಸಂಪೂರ್ಣವಾಗಿ ನನ್ನ ಪತ್ನಿಗೆ ಫೋನ್ ಪೇ ಮುಖಾಂತರ ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದೂರಿನಲ್ಲಿ ಹೇಳಿದ ಸಾಲದ ಹಣವನ್ನು ನಾನು ನಗದು ರೂಪದಲ್ಲಿ ಆರೋಪಿಗೆ ನನ್ನ ಮನೆಯಲ್ಲಿ ನೀಡಿರುತ್ತೇನೆ. ಐವತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿನ ಹಣವನ್ನು ನಗದು ರೂಪದಲ್ಲಿ ನೀಡಬಾರದು ಎಂಬ ನಿಯಮದ ಬಗ್ಗೆ ನನಗೆ ಗೊತ್ತಿಲ್ಲ.

3. ನಾನು ಆದಾಯ ತೆರಿಗೆಪಾವತಿದಾರನಲ್ಲ. ದೂರಿನಲ್ಲಿ ಹೇಳಿದ ಸಾಲದ ಹಣ ನನ್ನ ಉಳಿತಾಯದ ಹಣ ಆಗಿರುತ್ತದೆ. ನನ್ನ ಕೆಲಸದಿಂದ ಬಂದ ಆದಾಯದಲ್ಲಿ ಉಳಿತಾಯ ಮಾಡಿದ ಹಣ. ನಾನು ಮೆಕ್ಯಾನಿಕ್ ಕೆಲಸ ಮಾಡುತ್ತೇನೆ. ನನ್ನ ಮತ್ತು ಆರೋಪಿಯ ನಡುವೆ ದೂರಿನಲ್ಲಿ ಹೇಳಿರುವಂತೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 25-05-2023 ರಂದು ಆರೋಪಿ ನನ್ನ ಪತ್ನಿಯಿಂದ ಒಂದು ಲಕ್ಷ ರೂಪಾಯಿ ಸಾಲ ಪಡೆದಿದರು ಎಂದರೆ ಸರಿಯಲ್ಲ. ಸದ್ರಿ ಸಾಲದ ಹಣವನ್ನು ಆರೋಪಿಯ ಮಗ ಮತ್ತು ಮಗಳು ಫೋನ್ ಪೇ ಮೂಲಕ ನನ್ನ ಪತ್ನಿಗೆ ಮರುಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಸಾಲ ನೀಡಿದಾಗ ನನ್ನ ಪತ್ನಿ ಆರೋಪಿಯಿಂದ ನಿಪಿ-1 ಚೆಕ್ಕು ಮತ್ತು ಫೆಡರಲ್ ಬ್ಯಾಂಕಿನ ಚೆಕ್ ನಂ. 083685 ನ್ನು ಭದ್ರತೆಗಾಗಿ ಪಡೆದುಕೊಂಡಿದ್ದರು ಎಂದರೆ ಸುಳ್ಳು. ನನ್ನ ಪತ್ನಿ ಆರೋಪಿಗೆ ನೀಡಿದ ಸಾಲದ ಹಣವನ್ನು ಸಂಪೂರ್ಣವಾಗಿ ವಾಪಸ್ಸು ಪಡೆದುಕೊಂಡಿದ್ದರೂ ಸಹ ಹೆಚ್ಚಿನ ಹಣದ ದುರಾಸೆಗಾಗಿ ನನ್ನ ಮೂಲಕ ಭದ್ರತೆಗಾಗಿ ಪಡೆದ ನಿಪಿ-1 ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು, ಈ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿ, ವಕೀಲರ ಮೂಲಕ ಆರೋಪಿಗೆ ನೋಟೀಸ್ ನೀಡಿದ ನಂತರ ಆರೋಪಿ ನನ್ನ ವಿರುದ್ಧ ಮತ್ತು ನನ್ನ ಪತ್ನಿಯ ವಿರುದ್ಧ ದೂರು ದಾಖಲಿಸಿರುತ್ತಾರೆ ಎಂದರೆ ಹೌದು. ಆ ಪ್ರಕಾರ ಪೋಲೀಸರು ನನ್ನನ್ನು ಮತ್ತು ನನ್ನ ಪತ್ನಿಯನ್ನು ವಿಚಾರಣೆಗೆ ಕರೆದಾಗ ನಾನು ಈ

ಪ್ರಕರಣವನ್ನು ವಾಪಸ್ಸು ಪಡೆದುಕೊಳ್ಳುತೇನೆಂದು ಮುಚ್ಚಳಿಕೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಮುಚ್ಚಳಿಕೆ ಬರೆದುಕೊಟ್ಟರೂ ಸಹ ನಾನು ಪ್ರಕರಣವನ್ನು ವಾಪಸ್ಸು ಪಡೆಯದೇ ಆರೋಪಿಗೆ ತೊಂದರೆ ಕೊಡುವ ಸಲುವಾಗಿ ಪ್ರಕರಣವನ್ನು ಮುಂದುವರೆಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನಗಾಗಲೀ ಅಥವಾ ನನ್ನ ಪತ್ನಿಗಾಗಲೀ ಯಾವುದೇ ಹಣ ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**